<u>ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು</u>

ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 84/2016-17.

ದಿನಾಂಕ : 26-10-2016.

<u>ಉಪಸ್ಥಿತರು</u> : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

<u>ಮೇಲ್ಮನವಿದಾರರು</u>

ಓಡಿಯಪ್ಪ ಗೌಡ ಬಿನ್ ವೀರಪ್ಪ ಗೌಡ,
ಪೆರ್ಲ ಮನೆ, ಗೋಳಿತೊಟ್ಟು ಅಂಚೆ,
ಗೋಳಿತೊಟ್ಟು ಗ್ರಾಮ,
ಪುತ್ತೂರು ತಾಲೂಕು.ದ.ಕ

-ಮತ್ತು-

<u>ಪ್ರತಿವಾದಿಯವರು</u>

1.ತಹಶೀಲ್ದಾರರು,
ಪುತ್ತೂರು ತಾಲೂಕು ದ.ಕ.
2.ಕಂದಾಯ ನಿರೀಕ್ಷಕರು,
ಉಪ್ಪಿನಂಗಡಿ ಹೋಬಳಿ.

**---**

<u>ಪ್ರಸ್ತಾವನೆ</u> :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಸಲ್ಲಿಸಿರುವುದಾಗಿದೆ. ಪುತ್ತೂರು ತಾಲೂಕು ಗೋಳಿತೊಟ್ಟು ಗ್ರಾಮದ ಸ.ನಂ. 70/1ಪಿ1 ರಲ್ಲಿ 0.05 ಎಕ್ರೆಗೆ ಆಶ್ರಯ ಯೋಜನೆಯಡಿ ಕಡತ ಸಂಖ್ಯೆ ಎನ್.ಎ.ಡಿ.ಆರ್ (ಗೋಳಿತೊಟ್ಟು) 81/94-95 ದಿನಾಂಕ : 18-08-1994 ರಂತೆ ಹಕ್ಕು ಪತ್ರ ನೀಡಿದ ಜಮೀನಿನ ಖಾತಾ ವರ್ಗಾವಣೆ ಮಾಡುವಾಗ ಎಂ.ಆರ್.ಹೆಚ್ 11/2015-16 ದಿನಾಂಕ :28-09-2015 ರಲ್ಲಿ 0.05 ಎಕ್ರೆಗೆ ಬದಲು 0.03 ಎಕ್ರೆಗೆ ಖಾತಾ ಬದಲಾವಣೆ ಮಾಡಿದ ಉಪ್ಪಿನಂಗಡಿ ಕಂದಾಯ ನಿರೀಕ್ಷಕರ ಆದೇಶ ಹಾಗೂ ಸದ್ರಿ ಮ್ಯುಟೇಶನ್ ನಡವಳಿ ನಡೆಸಿರುವಾಗ ಕಡತದ ಆದೇಶ ಸಂಖ್ಯೆ ತಪಾವತು ಮಾಡಿರುವುದರ ಬಗ್ಗೆ ಉಪತಹಶೀಲ್ದಾರರು ನಾಡಕಛೇರಿ ಉಪ್ಪಿನಂಗಡಿ ಇವರು ದಿನಾಂಕ : 28-09-2015 ರಲ್ಲಿ ವಿಸ್ತೀರ್ಣ ತಪಾವತು ಮಾಡಲು ಆದೇಶಿಸದೆ ಇರುವುದನ್ನು ಪ್ರಶ್ನಿಸಿ ಈ ಪ್ರಾಧಿಕಾರಕ್ಕೆ ಮೇಲ್ಮನವಿದಾರರು ದಿನಾಂಕ:04-07-2016 ರಂದು ಮನವಿ (ಮೇಲ್ಮನವಿ) ಸಲ್ಲಿಸಿ ತಪಾವತು ಸರಿಪಡಿಸಲು ಕೋರಿರುವುದಾಗಿದೆ.

ಮೇಲ್ಮನವಿದಾರರ ಕೋರಿಕೆ ಹಾಗೂ ಅಧೀನ ಕಛೇರಿ ಕಡತ ಸಂಖ್ಯೆ MR H 11/15-16, MR H 08/15-16 ಮತ್ತು DCR 129/15-16 ರ ಕಡತಗಳನ್ನು ತರಿಸಿ ಪರಿಶೀಲಿಸಲಾಗಿದೆ. ಮೇಲ್ಮನವಿದಾರರಿಗೆ ಪುತ್ತೂರು ತಾಲೂಕು ತಹಶೀಲ್ದಾರರು ಉಪ್ಪಿನಂಗಡಿ ಹೋಬಳಿ ಗೋಳಿತೊಟ್ಟು ಗ್ರಾಮದ ಸ.ನಂ. 70/1ಪಿ1 ರಲ್ಲಿ 0.05 ಎಕ್ರೆ ನಿವೇಶನದ ಹಕ್ಕು ಪತ್ರವನ್ನು ಆಶ್ರಯ ಯೋಜನೆಯಡಿ ಕಡತ ಸಂಖ್ಯೆ ಎನ್.ಎ.ಡಿ.ಆರ್ (ಗೋಳಿತೊಟ್ಟು) 81/94-95 ದಿನಾಂಕ :

18-08-1994 ರಂತೆ ವಿತರಿಸಿರುವುದಾಗಿದೆ. ಆದರೆ ಪಹಣಿ ದಾಖಲೆಯನ್ನು ಸಕಾಲದಲ್ಲಿ ತಹಶೀಲ್ದಾರರು ಮಾಡಿರುವುದಿಲ್ಲ. ಪ್ರಸ್ತುತ ಪಹಣಿ ದಾಖಲಾತಿಗೆ ಅರ್ಜಿದಾರರು ತಹಶೀಲ್ದಾರರನ್ನು ದಿನಾಂಕ : 04-02-2015 ರಲ್ಲಿ ಮನವಿ ಸಲ್ಲಿಸುವ ಮೂಲಕ ಕೋರಿಕೊಂಡಿರುವಂತೆ ತನಿಖೆ ನಡೆಸಿ ತಹಶೀಲ್ದಾರರು ಪಹಣಿ ದಾಖಲಿಸುವಲ್ಲಿ ಕ್ರಮವಹಿಸಿದ್ದು, ಹಕ್ಕು ಪತ್ರದಲ್ಲಿ ನೀಡಿದ ವಿಸ್ತೀರ್ಣ 0.05 ಎಕ್ರೆ ಬದಲು 0.03 ಎಕ್ರೆಗೆ ಪಹಣಿ ದಾಖಲಿಸಿರುವುದು ಕಂಡು ಬಂದಿದ್ದು ಈ ದಾಖಲೆ ತಪಾವತಿನಿಂದ ಕೂಡಿರುವುದು ದೃಢಪಟ್ಟಿರುತ್ತದೆ.

ಮೇಲ್ಮನವಿದಾರರಿಗೆ ನೀಡಿದ ಹಕ್ಕುಪತ್ರ ಹಾಗೂ ಅದರಂತೆ ದಾಖಲಿಸಿದ ಪಹಣಿಯಲ್ಲಿನ ವಿಸ್ತೀರ್ಣಗಳು ತಾಳೆ ಇಲ್ಲದಿರುವುದು ದೃಢಪಟ್ಟಿದ್ದು ಅರ್ಜಿದಾರರ ಕೋರಿಕೆಯಂತೆ ಪಹಣಿ ಸರಿಪಡಿಸುವುದು ಸಮಂಜಸವೆಂದು ಕಂಡು ಬಂದಿರುವುದರಿಂದ ಈ ಕೆಳಗಿನಂತೆ ಆದೇಶ ಮಾಡಿದೆ.

## ಆದೇಶ.

ಪುತ್ತೂರು ತಾಲೂಕು ಉಪ್ಪಿನಂಗಡಿ ಹೋಬಳಿ ಗೋಳಿತೊಟ್ಟು ಗ್ರಾಮದ ಸ.ನಂ 70/1 ರ ಪಹಣಿಯಲ್ಲಿ ಶ್ರೀ ಓಡಿಯಪ್ಪ ಗೌಡ ಬಿನ್ ವೀರಪ್ಪ ಗೌಡ ರವರಿಗೆ ಎಮ್. ಆರ್ H 11/15-16 (ಕೋ.ಆ) ಮಂಜೂರು ದಿನಾಂಕ : 30-09-2015 ರಂತೆ ದಾಖಲಿಸಿದ 0.03 ಎಕ್ರೆ ಜಮೀನಿಗೆ ಸಂಬಂಧಿಸಿದ ಮ್ಯುಟೇಶನ್ ನಡವಳಿಯನ್ನು ರದ್ದುಪಡಿಸಿದೆ.ಮೇಲ್ಮನವಿದಾರರಿಗೆ ಹಕ್ಕುಪತ್ರ ನೀಡಿರುವುದನ್ನು ಪರಿಶೀಲಿಸಿದೆ. ಗೋಳಿತೊಟ್ಟು ಗ್ರಾಮದಲ್ಲಿ ಹೊಸದಾಗಿ ಮ್ಯುಟೇಶನ್ ನಡವಳಿ ನಡೆಸಿ ಪಹಣಿಯಲ್ಲಿ ದಾಖಲಿಸಲು ತಹಶೀಲ್ದಾರರು, ಪುತ್ತೂರು ತಾಲೂಕು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ:26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರಿಗೆ,.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಕಡತ ಸಂಖ್ಯೆ MR H 08/15-16, 11/15-16, & DCR 129/15-16 ಪುಟಸಂಖ್ಯೆ 1 ರಿಂದ 38 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.